ಸರಿಯಾದುದಲ್ಲ. ಇದು ಇಡೀ ಮೈಸೂರು ಜಿಲ್ಲೆಯಲ್ಲೇ ಜನಜನಿತವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ದಯೆಮಾಡಿ ಗಮನ ಕೊಡಬೇಕು. ಹುಣಸೂರಿನ ಕತೆಯನ್ನು ತಮಗೆ ಹೇಳಿದ್ದೇನೆ. ಇದು ಒಬ್ಬ ಹೆಣ್ಣುಮಗಳ ಮೇಲೆ ನಡೆದಿರತಕ್ಕಂಥ ಅಮಾನುಷ್ಯ ಕೃತ್ಯ; ಆ ಹೆಣ್ಣುಮಗಳ ಹೆಣ, ಪಕ್ಕದ ನದಿಯಲ್ಲಿ ಸಿಕ್ಕಿತು. ಈ ಕ್ಷಣದವರೆಗೂ, ಏನಾಗಿದೆ, ಏನು ಎನ್ನತಕ್ಕಂಥಾದ್ದನ್ನು ಸರ್ಕಾರವೂ ವಿಚಾರಿಸಿಲ್ಲ. ಅವರ ತಂದೆ ರಾಜಪ್ಪ ಎಂದು; ಪೋಲೀಸ್ ಸ್ಟೇಷನ್‌ನಲ್ಲಿ ದೂರನ್ನು ಕೊಟ್ಟರೂ ಸಹ ಇವತ್ತಿನವರೆಗೆ ಒಬ್ಬರನ್ನೂ ಬಂಧಿಸಿಲ್ಲ. ಒಬ್ಬರನ್ನೂ ನೋಡಿಲ್ಲ, ಅವರಿಗೆ ರಕ್ಷಣೆ ಕೊಟ್ಟಿಲ್ಲ. ಈ ಎರಡು ಪ್ರಕರಣಗಳ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಳ್ಳುತ್ತೀರೆಂದು ದಯಮಾಡಿ ಕೂಡಲೇ ಇದನ್ನು ಹೇಳಬೇಕು. ಹುಣಸೂರು ತಾಲ್ಲೂಕಿನಲ್ಲಿ ನಡೆದಿರತಕ್ಕಂತಾದ್ದು ಬಹಳ ಭೀಕರವಾದುದು. ತಮಗೂ ಗೊತ್ತಿದೆ, ತಮ್ಮ ಹತ್ತಿರವೂ ಅವರ ತಂದೆ ತಾಯಿಗಳು ಬಂದಿದ್ದಾರೆ. ಈ ಪರಿಸ್ಥಿತಿಯಲ್ಲಿ ಆ ಹುಡುಗಿಯ ಕೈ ಮುರಿದಿದ್ದಾರೆ. ಆಕೆಯ ಕೆನ್ನೆಯನ್ನು ಕತ್ತರಿಸಿದ್ದಾರೆ. ಶರೀರದ ಮೇಲೆ ಗಾಯಗಳಾಗಿವೆ. ಅಲ್ಲಿಯ ವೈದ್ಯರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇಂತಹ ವೈದ್ಯಕೀಯ ಪರೀಕ್ಷೆ, ಇಷ್ಟೆಲ್ಲಾ ನಡೆದಿದ್ದರೂ ಕೂಡ, ಸರ್ಕಾರ ಯಾವುದೇ ಒಂದು ಚಕಾರ ಶಬ್ದ ಎತ್ತಿಲ್ಲ ಮತ್ತು ಇದರ ಕಡೆಗೆ ಗಮನಹರಿಸಿಲ್ಲ ಎಂದು ಹೇಳಬೇಕಾಗಿದೆ. ಇದು ಅತ್ಯಂತ ನೋವಿನ ಪ್ರಸಂಗ. ಈ ಎರಡು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇನೆ. ಒಂದು ಹುಣಸೂರಿನ ಪ್ರಕರಣ; ಇದನ್ನು ಸಮಗ್ರವಾಗಿ ಸಿ.ಓ.ಡಿ ಅಥವಾ ಸಿಬಿಐಗೆ ಒಪ್ಪಿಸಬೇಕು. ಎರಡನೆಯದು ನಾಗವಳ್ಳಿ ಪ್ರಕರಣವನ್ನೂ ಸಹ ಸಿಓಡಿ ಅಥವಾ ಸಿಬಿಐಗೆ ಒಪ್ಪಿಸಬೇಕು ಎಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ದಯಮಾಡಿ ಈ ಬಗ್ಗೆ ಸರ್ಕಾರದ ನಿರ್ಧಾರವೇನು ಎನ್ನುವುದನ್ನು ಹೇಳಬೇಕು.

*ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಹುಣಸೂರು ಪ್ರಕರಣದಲ್ಲಿ ಆ ಹುಡುಗಿಯ ತಂದೆಯವರು ನನ್ನನ್ನೂ ಭೇಟಿಯಾಗಿದ್ದರು. ಶಾಲಾ ಪರೀಕ್ಷೆಗೆ ಹೊರಟ ಹುಡುಗಿ ಮನೆಗೆ ಬಂದೇ ಇಲ್ಲ. ಅದರ ನಂತರ ಸಿಕ್ಕಿದ್ದು ಆಕೆಯ ಹೆಣ. ಅದೂ ನದಿಯಿಂದ. ನಾನು ಇಷ್ಟೇ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇನೆ. ಈ ಬಗ್ಗೆ ಇವತ್ತಿನವರೆಗೂ ಯಾರನ್ನೂ ಅರೆಸ್ಟ್ ಮಾಡುವುದಕ್ಕಾಗಿಲ್ಲ. ಯಾವ ತನಿಖೆ ಇಲ್ಲ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಇಂತಹ ಘಟನೆಗಳು ಆಗುತ್ತಲೇ ಇದೆ. ಹಾಗಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಈ ಆರೋಪಿಗಳನ್ನು ಹಿಡಿಯುವುದಕ್ಕೆ ಏಕೆ ನಿಮ್ಮ ಸರ್ಕಾರ ಸಿದ್ಧವಿಲ್ಲ. ನಿಮಗೆ ಏನು ಕಷ್ಟ ಆಗುತ್ತಿದೆ. ಚಾಮರಾಜನಗರ ತಾಲ್ಲೂಕಿನ ವಿಷಯವೂ ಇಲ್ಲಿ ಪ್ರಸ್ತಾಪವಾಗಿದೆ. ನಾಗಹಳ್ಳಿ ಗ್ರಾಮದ ಒಬ್ಬ ಬಡ ಉಪ್ಪಾರ ಜನಾಂಗದ ಮಹದೇವಶೆಟ್ಟಿಯ ಕೊಲೆಯಾಗಿದೆ. ಅದರ ಬಗ್ಗೆ ಯಾರನ್ನೂ ಅರೆಸ್ಟ ಮಾಡಿಲ್ಲ. ಹಾಗಾದರೆ, ಸಮಾಜದಲ್ಲಿ ಇಂತಹ ಕಡು ಬಡವರು, ಹಿಂದುಳಿದ ಜನಾಂಗದವರ ಕೊಲೆಯಾದಾಗ, ಸರ್ಕಾರ ಯಾವುದೇ ಲಕ್ಷ್ಯ ಕೊಡುವುದಿಲ್ಲ. ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ, ನಾವೇನು ಹೇಳಬೇಕಾಗುತ್ತದೆಂದರೆ ಛೀಮಾರಿ

ಹಾಕ ಬೇಕಾಗುತ್ತದೆ. ಹಾಗಾಗಿ ಈ ಎರಡೂ ಪ್ರಕರಣಗಳಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದು ಗೊತ್ತಾಗಬೇಕಾಗಿದೆ. ಮತ್ತೆ ಇದರ ಬಗ್ಗೆ ಸಿಓಡಿ ತನಿಖೆಯನ್ನು ಈ ಎರಡೂ ಪ್ರಕರಣದಲ್ಲಿ ಮಾಡಿ, ಯಾರು ಈ ಕೊಲೆ ಮಾಡಿದ್ದಾರ, ಅವರಿಗೆ ಶಿಕ್ಷೆಯಾಗುವ ಬಗ್ಗೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಎಲ್ಲಾ ತರಹದ ಪ್ರಯತ್ನ ಸರ್ಕಾರ ಮಾಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ.

*ಶ್ರೀ ಚಿಕ್ಕಮಾಧು (ಹುಣಸೂರು) : ಮಾನ್ಯ ಅಧ್ಯಕ್ಷರೇ, ಈಗ ಏನು ಸನ್ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ವಿರೋಧಪಕ್ಷದ ನಾಯಕರು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬೀರನಹಳ್ಳಿ ಗ್ರಾಮದ ಯುವತಿಯ ಕೊಲೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು 31ನೇ ತಾರೀಖು ಎಸ್.ಎಸ್.ಎಲ್.ಸಿ. ಪರೀಕ್ಷೆ ಪ್ರಾರಂಭವಾಗುವಂತಹ ದಿನ ಆ ಮಗು ಬೆಳಿಗ್ಗೆ 5-30 ಗಂಟೆಗೆ ಸ್ನಾನ ಮಾಡಿ ಪರೀಕ್ಷೆಗೆ ಹೋಗಬೇಕು ಅಂತ ಹೇಳಿ ಸಿದ್ದವಾಗುವಂತಹ ವೇಳೆ ಅವರ ತಾಯಿಗೆ ಕಾಫಿ ಮಾಡಮ್ಮ ಅಂತ ಹೇಳಿ ಆ ಮಗು ಹೊರಗಡೆ ಓದುತ್ತಾ ಕುಳಿತಿತ್ತು. ತಾಯಿ ಕಾಫಿ ಮಾಡಿದ ಮೇಲೆ ಆ ಮಗು ಹೊರಗಡೆ ಇರಲಿಲ್ಲ ಎನ್ನತಕ್ಕಂಥಾದ್ದನ್ನು ನೋಡಿ ಆ ತಾಯಿ ಎಲ್ಲಿ ಹೋಗಿದೆ ನನ್ನ ಮಗು ಎಂದು ಬಹಳ ಗಡಿಬಿಡಿ ಆಗಿದ್ದಾರೆ. ಇಂತಹ ಸಂದರ್ಭದಲ್ಲಿ ಪೋಲೀಸ್‌ಗೆ ಕೂಡ ಆ ದಿನ ಅವರ ತಂದೆ ನನ್ನಮಗಳು ತಪ್ಪಿಸಿಕೊಂಡಿದ್ದಾರೆ ಅಂತ ದೂರು ಸಹ ಸಲ್ಲಿಸಿದ್ದಾರೆ. ಪೋಲೀಸಿನವರು ಮಿಸ್ಸಿಂಗ್ ಕೇಸ್ ಅಂತ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಆದರೆ ಒಂದನೇ ತಾರೀಖು ಮದ್ಯಾಹ್ನ ನಾಲ್ಕು ಗಂಟೆಗೆ ಆ ಊರಿನ ಪಕ್ಕದಲ್ಲಿ ಹರಿಯತಕ್ಕಂಥ ಲಕ್ಷ್ಮಣ ತೀರ್ಥ ನದಿಯಲ್ಲಿ ಆ ಮಗುವಿನ ಹೆಣ ಪತ್ತೆಯಾಗಿದೆ. ನಂತರ ಪೋಲೀಸ್ ಇಲಾಖೆಯವರು ಹೋಗಿ ನೋಡಿದ್ದಾರೆ, ಮತ್ತೆ ಸಂಬಂಧ ಪಟ್ಟಂತೆ ವೈದ್ಯಾಧೀಕಾರಿಗಳು ಮೂರನೇ ದಿನ ಹೋಗಿ ಶವ ಪರೀಕ್ಷೆಯನ್ನು ಕೂಡ ಮಾಡಿದ್ದಾರೆ. ನಾನು ಎರಡನೇ ತಾರೀಖಿನವರೆಗೂ ಕೂಡ ಈ ಸದನದಲ್ಲಿ ಇದ್ದಿದ್ದರ ದಿಸೆಯಿಂದ 3ನೇತಾರೀಖು ನಾನು ನನ್ನ ಕ್ಷೇತ್ರಕ್ಕೆ ಹೋದಾಗ ಈ ವಿಚಾರ ಗೊತ್ತಾಯಿತು. 3ನೇ ತಾರೀಖು ಮದ್ಯಾಹ್ನ ನಾನು ಅಲ್ಲಿನ ಸಂಬಂಧಪಟ್ಟಂತಹ ಅಧಿಕಾರಿಗಳು ಅಸಿಸ್ಟೆಂಟ್ ಕಮಿಷನರ್ ಡಿವೈಎಸ್‌ಪಿ ಮತ್ತು ತಹಶೀಲ್ದಾರ್ ಸಬ್ ಇನ್ಸ್‌ಪೆಕ್ಟರನ್ನು ಒಳಗೊಂಡಂತೆ ಆ ಗ್ರಾಮಕ್ಕೆ ನಾವೆಲ್ಲರೂ ಕೂಡ ಭೇಟಿ ಕೊಟ್ಟೆವು, ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಆ ಒಂದು ಗ್ರಾಮದ ಮುಖಂಡರುಗಳನ್ನು ನಾವು ಕರೆಯಿಸಿ ವಿಚಾರಣೆ ಮಾಡಿದಾಗ ಆ ಜನ ಕೂಡ ಏನು ಅಭಿಪ್ರಾಯ ಪಟ್ಟಿದ್ದಾರೆಂದರೆ, ಹಿಂದೆಂದೂ ಕೂಡ ಆ ಗ್ರಾಮದಲ್ಲಿ ಇಂತಹ ಅಹಿತಕರವಾದ ಘಟನೆ ನಡೆದಿಲ್ಲ. ಇಂತಹ ಒಂದು ಘಟನೆ ನಡೆದಿರತಕ್ಕಂಥಾದ್ದು ನಮಗೆ ಅನುಮಾನಕ್ಕೆ ಕಾರಣವಾಗಿದೆ ನಮ್ಮ ಹುಡುಗಿಯ ಸಾವಿನ ಬಗ್ಗೆ ನಮಗೆ ಅನುಮಾನ ಇದೆ. ಇದರ ಬಗ್ಗೆ ತಾವು ಸರ್ಕಾರದ ವತಿಯಿಂದ ಸಿಓಡಿ ತನಿಖೆ ಮಾಡಿಸಿ ನಮಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಹೇಳಿ ಉಭಯಸ್ಥರು ಕೂಡ ಹುಡುಗಿಯ ತಂದೆತಾಯಿ ಮತ್ತು ಇವರು ಯಾರ ಮೇಲೆ ಆರೋಪ ಮಾಡಿದ್ದಾರೆ, ಅವರು ಕೂಡ ಸಿಓಡಿ ತನಿಖೆಗೆ ಸಿದ್ಧವಾಗಿದ್ದಾರೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ನಾನು ಈಗಾಗಲೇ ತಮ್ಮ ಹತ್ತಿರ ಖುದ್ದಾಗಿ ಬಂದು ಮಾತನಾಡಿದ್ದೇನೆ. ತಾವು ಕೂಡ ಭರವಸೆ ಕೊಟ್ಟಿದ್ದೀರಿ, ಆದರೆ ಆ ಒಂದು ಸ್ಥಳೀಯ

ಜನರು ಮತ್ತೆ ಹುಡುಗಿಯ ತಂದೆ ತಾಯಿಗಳು ನಮಗೆ ಕೊಲೆಯ ಅನುಮಾನ ಇದೆ, ಇದರ ಬಗ್ಗೆ ದಯವಿಟ್ಟು ಸಿ.ಓ.ಡಿ. ತನಿಖೆ ಮಾಡಿಸಬೇಕು ಅಂತ ಅವರು ಕೂಡ ಅರ್ಜಿನಲ್ಲಿ ಸಲ್ಲಿಸಿದ್ದಾರೆ. ಉಭಯಸ್ಥರು ಕೂಡ ತಮ್ಮ ಒಂದು ಅನುಮತಿಯನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ ನಾನು ತಮ್ಮ ಮುಖಾಂತರ ಈ ಒಂದು ವಿಚಾರವನ್ನು ಸಿ.ಓ.ಡಿ. ಗೆ ವಹಿಸಿ ಈ ವಿಚಾರದಲ್ಲಿ ಸತ್ಯಾಸತ್ಯತೆಯನ್ನು ಕಂಡುಹಿಡಿದು ತಾವು ಬೆಳಕು ಚೆಲ್ಲಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

*ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) : ಮಾನ್ಯ ಸಭಾಧ್ಯಕ್ಷರೇ, ಹುಣಸೂರು ತಾಲ್ಲೂಕಿನಲ್ಲಿ ಬೀರನಹಳ್ಳಿಯ ಗ್ರಾಮದಲ್ಲಿ ಭಾಗ್ಯ ಎನ್ನತಕ್ಕಂಥ ವಿದ್ಯಾರ್ಥಿನಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಕೂಡಬೇಕಾಗಿತ್ತು. ಅವತ್ತು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಬೆಳಿಗ್ಗೆ 5-30 ಗಂಟೆ ಸಮಯದಲ್ಲಿ ಹುಣಸೂರಿಗೆ ಪರೀಕ್ಷೆಗೆ ಹೋಗಬೇಕಾಗಿತ್ತು. ಈ ವಿಷಯವನ್ನು ತನ್ನ ತಾಯಿಗೆ ಆಕೆ ಹೇಳಿ, 5-30 ಗಂಟೆ ಸಮಯದಲ್ಲಿ ಮನೆಬಿಟ್ಟು ಹೊರಟಿದ್ದಾಳೆ. ಮನೆ ಬಿಟ್ಟು ಹೊರಟಾಗ ತಾಯಿಗೆ ಗಾಬರಿ ಆಯಿತು. ಗಾಬರಿಯಾದಾಗ ಊರಿನಲ್ಲಿ ಹುಡುಕಿದರು. ಭಾಗ್ಯ ಎಲ್ಲೋ ಹೋಗಿದ್ದಾಳೆ ಎಂದು ಗೊತ್ತಾದ ಮೇಲೆ ಸಾಯಂಕಾಲ 5-30 ಗಂಟೆಗೆ ಪೋಲೀಸ್ ಸ್ಟೇಶನ್‌ಗೆ ಹೋಗಿ ನಮ್ಮ ಮಗಳು ನಾಪತ್ತೆಯಾಗಿದ್ದಾಳೆ. ಕಾಣಿಸುತ್ತಾ ಇಲ್ಲ ಎಂದು ಪೋಲೀಸ್‌ಗೆ ದೂರು ಕೊಟ್ಟಿದ್ದಾರೆ. ದೂರು ಕೊಟ್ಟ ಮಾರನೇ ಬೆಳಿಗ್ಗೆಗೆ ಪಕ್ಕದಲ್ಲಿ ಸುಮಾರು ಒಂದೂವರೆ ಕಿಲೋಮಿಟರ್ ದೂರದಲ್ಲಿ ಲಕ್ಷ್ಮಣ ತೀರ್ಥ ಎನ್ನತಕ್ಕಂಥ ಒಂದು ನದಿ ಇದೆ. ಆ ನದಿಯಲ್ಲಿ ಹೆಣ ತೇಲಾಡುತ್ತಿರುವುದನ್ನು ಗಮನಿಸಿದ್ದಾರೆ. ಮತ್ತು ಜನ ಕೂಡ ಹೀಗೆ ಈ ಮಗುವಿನ ಹೆಣ ಇಲ್ಲಿ ತೇಲುತ್ತಿದೆ ಎಂದು ದೂರು ಕೊಟ್ಟಿದ್ದರ ಮೇಲೆ ಪೋಲೀಸಿನವರು ಕೂಡ ಬಂದು ತನಿಖೆ ಮಾಡಿದ್ದಾರೆ ಡಾಕ್ಟರ್‌ಸರ್ಟಿಫಿಕೇಟ್ ಆಗಿದೆ, ಎಲ್ಲಾ ಆಗಿದೆ. ಈಗ ಎಲ್ಲರಿಗೂ ಬಂದಿರತಕ್ಕಂಥ ಸಂಶಯ ಏನು ಅಂದರೆ ಇದು ಏನು ಕೊಲೆ ಆಗಿದೆಯೋ ಅಥವಾ ಆತ್ಮಹತ್ಯೆ ಆಗಿದೆಯೋ ಎನ್ನತಕ್ಕಂಥ ಒಂದು ಸಂಶಯ ಬಂದಿದೆ. ಇದು ನಿವಾರಣೆ ಆಗಬೇಕು. ಯಾರು ಕೊಲೆ ಮಾಡಿರತಕ್ಕಂಥಾದ್ದು, ಇದಕ್ಕೆ ಸಂಬಂಧಪಟ್ಟರತಕ್ಕಂಥವರು ಯಾರು ಎನ್ನತಕ್ಕಂಥಾದ್ದು ಒಂದು ನಿಗಧಿಯಾಗಬೇಕಾಗುತ್ತದೆ. ಈ ಮಗೂ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಯೋ ಇಲ್ಲವೇ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಾನು ಪಾಸಾಗುತ್ತೇನೋ ಇಲ್ಲವೋ ಎಂದು ಹೆದರಿಯೋ ಯಾವುದೋ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೋ ಇಲ್ಲಾ ಯಾರಾದರೂ ಕೊಲೆ ಮಾಡಿರತಕ್ಕಂಥಾದ್ದು ಇರಬಹುದು ಎಂದು ನಮಗೆ ಅರ್ಜಿಗಳನ್ನು ಕೊಟ್ಟಿದ್ದಾರೆ. ಪತ್ರಿಕೆಗಳಲ್ಲೂ ಕೊಟ್ಟಿದ್ದಾರೆ ಮತ್ತೆ ಅವರ ತಂದೆತಾಯಿಗಳಿಗೂಕೂಡ ಇದರ ಹಿಂದೆ ಯಾರೋ ಇದ್ದಾರೆ, ಎನ್ನತಕ್ಕಂಥಾದ್ದು ಕೂಡ ಹೇಳಿದ್ದಾರೆ. ಅವರು ಕೊಟ್ಟಿರತಕ್ಕಂಥ ಅರ್ಜಿಯನ್ನು ನಾನು ತಮ್ಮ ಅವಗಾಹನೆಗೆ ಕಳುಹಿಸಿಕೊಡುತ್ತೇನೆ. ಆದ್ದರಿಂದ ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೇ. ಇದರ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ಆಗಬೇಕು. ಇದು ಆತ್ಮಹತ್ಯೆಯಿಂದ ಆಗಿರತಕ್ಕಂಥಾದ್ದೇ ಇಲ್ಲಾ ಕೊಲೆ ಆಗಿರತಕ್ಕಂಥಾದ್ದೇ ಎಂದು ತಿಳಿಯಬೇಕಾಗಿದೆ. ಕೊಲೆ ಆಗಿರತಕ್ಕಂಥಾದ್ದು ಎಂದು ಪತ್ರಿಕೆಗಳಲ್ಲಿ ನೋಡಿದರೆ ಸ್ವಲ್ಪ ಸಂಶಯ ಮೂಡಿ ಬರುತ್ತದೆ.

ಯಾವ ರೀತಿ ಸಂಶಯ ಅಂದರೆ ಕತ್ತುಹಿಸುಕಿರತಕ್ಕಂಥಾದ್ದು ಮತ್ತು ಬಾಯಿಯಲ್ಲಿ ರಕ್ತ ಬಂದಿರತಕ್ಕಂಥಾದ್ದು ಮತ್ತು ಕೈಯಲ್ಲಿ ಗಾಯ ಆಗಿದೆ ಎನ್ನತಕ್ಕಂಥಾದ್ದು ಕೂಡ ಪತ್ತೆ ಆಗಿದೆ ಎನ್ನತಕ್ಕಂಥಾದ್ದನ್ನು ಪತ್ರಿಕೆಗಳಲ್ಲಿ ಕೂಡ ಬರೆದಿದ್ದಾರೆ.

12.25 ಪಿ. ಎಂ.

ಪತ್ರಿಕೆಗಳಲ್ಲಿ ಬಂದಿರುವುದೆಲ್ಲ ಸರಿಯಾದದ್ದು ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಕೆಲವರು ಇವಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳುತ್ತಾರೆ. ಕೊಲೆ ಮಾಡಿದ್ದಾರೆ. ಇದರ ಹಿಂದೆ ಯಾವುದೋ ಒಂದು ಗ್ರಡ್ಜ್ ಇತ್ತು ಎಂದು ಕೂಡ ಹೇಳುತ್ತಾರೆ. ಅದ್ದರಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಈ ಸಂಶಯ ನಿವಾರಣೆಯಾಗಬೇಕು. ಇದು ಕೊಲೆಯಾಗಿರತಕ್ಕಂಥಾದ್ದೇ ಅಥವಾ ಆತ್ಮಹತ್ಯೆಯೇ ಎಂಬುದು ಎಲ್ಲರಿಗೂ ಗೊತ್ತಾಗಬೇಕು. ಇದನ್ನು ಸಿಬಿಐಗಾದರೂ ರೆಫರ್ ಮಾಡಿ, ಸಿಓಡಿಗಾದರೂ ರೆಫರ್ ಮಾಡಿ. ಒಟ್ಟಿನಲ್ಲಿ ಸತ್ಯಾಂಶ ಹೊರಬರಬೇಕು. ಮೈಸೂರು ಜಿಲ್ಲೆಯ ಜನತೆಗೆ ಗೊತ್ತಾಗಬೇಕು. ಇದೇ ರೀತಿ ಜಿಲ್ಲೆಯಲ್ಲಿ ಅಲ್ಲಲ್ಲಿ ಆಗುತ್ತಾ ಇರುತ್ತದೆ. ಅದು ಪಿರಿಯಾ ಪಟ್ಟಣದಲ್ಲಿ ಆಗಿರಬಹುದು, ಹುಣಸೂರಿನಲ್ಲಿ ಆಗಿರಬಹುದು, ಚಾಮರಾಜ ನಗರದಲ್ಲಿ ಆಗಿರಬಹುದು, ಕೊಳ್ಳೇಗಾಲದಲ್ಲಿ ಆಗಿರಬಹುದು, ಹೀಗೆ ಹೆಚ್ಚಾಗಿ ಮೈಸೂರು ಜಿಲ್ಲೆಯಲ್ಲಿ ಆಗುತ್ತಾ ಇದೆ. ಇದರ ಬಗ್ಗೆ ಇರುವ ಸಂಶಯ ನಿವಾರಣೆಯಾಗಬೇಕು. ಹೀಗೆ ಅನೇಕ ಕೊಲೆಗಳು ಆಗಿ ಮುಚ್ಚಿ ಹಾಕಿರತಕ್ಕಂಥದ್ದು ಕೂಡ ಇದೆ. ಇದರ ಬಗ್ಗೆ ನಿಷ್ಪಕ್ಷಪಾತಾವಾದ ತನಿಖೆಯಾಗಬೇಕು. ಇದನ್ನು ಸಿಓಡಿಗೆ ಕೊಟ್ಟು ನಮ್ಮಲ್ಲಿ ಮತ್ತು ಜನತೆಯಲ್ಲಿರತಕ್ಕಂಥ ಸಂಶಯವನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ನಾಗವಳ್ಳಿ ಮತ್ತು ಹುಣಸೂರು ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ವಿವರ ಕೊಡಲು ನಾನು ಹೋಗುವುದಿಲ್ಲ. ನಾಗವಳ್ಳಿಯ ವಿಚಾರ ಪ್ರಸ್ತಾಪವಾಗಿದೆ, ಅದಕ್ಕೆ ಒಂದು ಲಕ್ಷ ರೂಪಾಯಿಯ ಪರಿಹಾರ ಕೂಡ ಕೊಡುತ್ತೇನೆ ಎಂದು ಹೇಳಿದ್ದೇನೆ. ಮತ್ತು ಅದರ ಬಗ್ಗೆ ಸೂಕ್ತ ತನಿಖೆಯನ್ನು ಮಾಡಿಸುತ್ತೇವೆ. ಹುಣಸೂರು ಬಗ್ಗೆ ಅಲ್ಲಿ ಆದ ಸಾವು ಸಂಶಯಾಸ್ಪದ ಸಾವು ಎಂದು ಕಂಡು ಬಂದುದರಿಂದ ನಾವು ಅದನ್ನು ಸಿಓಡಿಗೆ ಒಪ್ಪಿಸುತ್ತೇನೆ. ನಾಗವಳ್ಳಿಯ ಬಗ್ಗೆ ಸಂಜೆಯೊಳಗೆ ಒಂದು ಹೇಳಿಕೆಯನ್ನು ಕೊಡುತ್ತೇನೆ.

ವಿಷಯ : ಶಿವಮೊಗ್ಗ ಭದ್ರಾವತಿ ಕಾರ್ಪೊರೇಷನ್‌ನಲ್ಲಿ ನಡೆದಂಥ ವ್ಯವಹಾರಗಳ ಬಗ್ಗೆ.

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ನನ್ನ ಹಕ್ಕುಚ್ಯುತಿಯಾಗಿರುವಂಥ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೆ. ಮೊನ್ನೆ ಅಧಿವೇಶನ ಕಾಲದಲ್ಲಿ ವಿವಿಧ ಇಲಾಖೆಗಳ ಮೇಲಿನ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಶಿವಮೊಗ್ಗ-ಭದ್ರಾವತಿ ಕಾರ್ಪೊರೇಷನ್‌ನಲ್ಲಿ ನಡೆದಂಥ ಅವ್ಯವಹಾರಗಳ

ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅಲ್ಲಿಗೆ ಕಾರ್ಪೊರೇಷನ್ ಬಂದ ದಿನವೇ ಬಹಳ ಅವ್ಯವಹಾರ ನಡೆದಂಥ ವಿಚಾರದಲ್ಲಿ ಈ ಸದನದಲ್ಲಿ ಚರ್ಚಿಸಲು ನಮಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಶಿವಮೊಗ್ಗ ಜನತೆಯ ಹಣ ಕಾರ್ಪೊರೇಷನ್‌ನಲ್ಲಿ ಏನು ಪೋಲಾಗಿದೆ, ಅದನ್ನು ಸರಕಾರದ ಗಮನಕ್ಕೆ ತರಲು ಚರ್ಚೆಯಲ್ಲಿ ನಾನು ಪಾಲ್ಗೊಂಡು ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ತನಿಖೆ ಮಾಡಲು ಸರಕಾರಕ್ಕೆ ಕೇಳಿಕೊಂಡ ವಿಚಾರ ಪತ್ರಿಕೆಗಳಲ್ಲಿ ಬಂದಾಗ, ಶಿವಮೊಗ್ಗ-ಭದ್ರಾವತಿ ಕಾರ್ಪೊರೇಷನ್‌ನ ಮಾಸಿಕ ಸಭೆಯಲ್ಲಿ ಈ ಶಾಸನ ಸಭೆಯಲ್ಲಿ ತಂದಂಥ ವಿಚಾರದ ಬಗ್ಗೆ ಒಂದು ಖಂಡನಾ ನಿರ್ಣಯವನ್ನು ಪಾಸ್ ಮಾಡಿದ್ದಾರೆ. ಹಾಗಾದರೆ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವಾಗ ಇಂಥ ವಿಚಾರದ ಪ್ರಸ್ತಾಪವನ್ನು ನಾವು ಶಾಸಕರಾಗಿ ಎಲ್ಲಿ ಮಾಡಲು ಸಾಧ್ಯವಾಗುತ್ತದೆ? ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರೆ ಕಾರ್ಪೊರೇಷನ್ ಸಭೆಯಲ್ಲಿ ನನ್ನ ಮೇಲೆ ಖಂಡನಾ ನಿರ್ಣಯವನ್ನು ಮಾಡುತ್ತಾರೆ. - ಈಶ್ವರಪ್ಪ ಆರೋಪಕ್ಕೆ ಪ್ರತಿಭಟನಾ ನಿರ್ಣಯ ಸ್ವೀಕಾರ. ಶಿವಮೊಗ್ಗ ಶಾಸಕ ಶ್ರೀ ಕೆ. ಎಸ್. ಈಶ್ವರಪ್ಪ ಅವರು ಇತ್ತೀಚೆಗೆ ವಿಧಾನ ಸಭೆ ಹಾಗೂ ಪತ್ರಿಕಾ ಗೋಷ್ಠಿಗಳಲ್ಲಿ ಶಿವಮೊಗ್ಗ-ಭದ್ರಾವತಿ ನಗರಪಾಲಿಕೆಯ ಮೇಯರ್ ಹಾಗೂ ಸದಸ್ಯರ ವಿರುದ್ಧ ಭ್ರಷ್ಟಾಚಾರದ ಕುರಿತು ಮಾಡಿದ ಆರೋಪಗಳನ್ನು ಖಂಡಿಸುವ ಮತ್ತು ಪ್ರತಿಭಟಿಸುವ ನಿರ್ಣಯವೊಂದನ್ನು ಶಿವಮೊಗ್ಗ-ಭದ್ರಾವತಿ ನಗರಪಾಲಿಕೆ ಕೈಗೊಂಡಿದೆ. ಇದನ್ನು ನೋಡಿದರೆ ನಮಗೆ ತುಂಬಾ ಆಶ್ಚರ್ಯವಾಗುತ್ತದೆ. ನಗರಪಾಲಿಕೆಯ ಮಾಸಿಕ ಸಭೆಯಲ್ಲಿ ಶ್ರೀ ಎಸ್. ಬಿ. ಕೇಶವಪ್ಪ ನಿರ್ಣಯವನ್ನು ಮಂಡಿಸಿದಾಗ ಅದಕ್ಕೆ ಉಳಿದವರು ಪೂರ್ಣ ಬೆಂಬಲ ವ್ಯಕ್ತ ಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಮೇಯರ್ ಶ್ರೀ ಮಲ್ಲಿಕಾರ್ಜುನರವರು ಶಾಸಕರಿಗೆ ಈ ಸಭೆಯಲ್ಲಿ ಹಾಜರಾಗಲು ಅವಕಾಶವಿದ್ದರೂ ಹಾಜರಾಗಿ ಅಭಿವೃದ್ಧಿಕಾರ್ಯಗಳಲ್ಲಿ ಪಾಲ್ಗೊಳ್ಳದೆ, ಕೇವಲ ರಾಜಕೀಯಕ್ಕಾಗಿ ಶಾಸನ ಸಭೆಯಲ್ಲಿ ಆರೋಪ ಮಾಡುವುದನ್ನು ನಗರಪಾಲಿಕೆಯು ಖಂಡಿಸುತ್ತದೆ ಎಂದರು. ಸದಸ್ಯ ಶ್ರೀ ಹೊನ್ನಪ್ಪನವರು ಶಾಸಕರು ಸುಳ್ಳು ಆರೋಪವನ್ನು ಮಾಡುವುದನ್ನು ಬಿಟ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲಿ ಎಂದು ನಿರ್ಣಯವನ್ನು ಕೈಗೊಂಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ಒಂದು ವಿಚಾರವನ್ನು ತಾವುಗಳು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿ, ಯಾರ್ಯಾರು ಈ ನಿರ್ಣಯದಲ್ಲಿ ಪಾಲ್ಗೊಂಡಿದ್ದಾರೆ, ಅವರುಗಳನ್ನು ಕರೆಸಿ ಛೀಮಾರಿ ಹಾಕಬೇಕೆಂದು ನಾನು ಕೇಳಿಕೊಂಡು ನನ್ನ ರಕ್ಷಣೆಗೆ ಮಾನ್ಯ ಸಭಾಧ್ಯಕ್ಷರು ಬರಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ, ಶಿವಮೊಗ್ಗ-ಭದ್ರಾವತಿ ಕಾರ್ಪೊರೇಷನ್‌ನಲ್ಲಿಅವ್ಯವಹಾರಗಳು ಆಗುತ್ತಿದ್ದರೆ, ಕ್ಷೇತ್ರದ ಶಾಸಕನಾಗಿ ನನಗೆ ಇಲ್ಲಿ ಪ್ರಸ್ತಾಪ ಮಾಡಲು ಹಕ್ಕು ಇಲ್ಲವೆ? ಇದು ಅಪರಾಧವೆ? ನನಗೆ ಈ ಸದನದಲ್ಲಿ ರಕ್ಷಣೆ ಇಲ್ಲವಾದಲ್ಲಿ ನಾನು ಮುಂದೆ ಮಾತನಾಡಲು ಆಗಲಾರದು. ಮಾನ್ಯ ಮುಖ್ಯಮಂತ್ರಿಗಳಿಗೆ ಅಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿದೆ. ಅಲ್ಲಿ ಸಾಕಷ್ಟು ಹಗರಣಗಳು ಇವೆ. ಅಲ್ಲಿಯ ಕಾಂಟೆಸ್ಸಾ ಕಾರು ಎಲ್ಲಿದೆ ಎಂದು ಗೊತ್ತಿಲ್ಲ. ಎರಡು ಎಕರೆ ಜಮೀನನ್ನು ಖಾತೆ ಬದಲಾವಣೆ ಮಾಡಲು ಹೋಗಿ ಅದು ಮೂರು ಕಾಲು ಎಕರೆಯಾಗಿ, ಅಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ. ಹೀಗೆ ಅವ್ಯವಹಾರ ಮಾಡುವ ಕಾರ್ಪೊರೇಷನ್‌ನನ್ನು ವಜಾ ಮಾಡಿ ಚುನಾವಣೆ ನಡೆಸಿ ಎಂದು ನಾನು ಹೇಳಿದ್ದೆ. ಆದರೆ ಸರಕಾರದವರು ಆ ಬಗ್ಗೆ ಗಮನಕೊಟ್ಟಿಲ್ಲ. ಹಾಗೆಯೇ ನನಗೆ ಇಲ್ಲಿ ಕೂಡ ಪ್ರಸ್ತಾಪ ಮಾಡಲು ಅಡ್ಡಿಯಾದರೆ,